"ಮಧುರ ಮಕ್ಕಳೇ - ತಮ್ಮ ಸ್ಥಿತಿಯನ್ನು ಶ್ರೇಷ್ಠ ಮಾಡಿಕೊಳ್ಳಬೇಕೆಂದರೆ ಬೆಳಗ್ಗೆ-ಬೆಳಗ್ಗೆ ಎದ್ದು ಏಕಾಂತದಲ್ಲಿ ಕುಳಿತು ಈ ರೀತಿ ವಿಚಾರ ಮಾಡಿ - ನಾನು ಆತ್ಮನಾಗಿದ್ದೇನೆ ನಾವೀಗ ಮನೆಗೆ ಹಿಂತಿರುಗಬೇಕು ಏಕೆಂದರೆ ಈ ನಾಟಕವು ಪೂರ್ಣವಾಗಿದೆ"

ಪ್ರಶ್ನೆ: ಸಂಪೂರ್ಣ ಬಲಿಯಾಗುವುದರ ಅರ್ಥವೇನಾಗಿದೆ?

ಉತ್ತರ: ಸಂಪೂರ್ಣ ಬಲಿಯಾಗುವುದು ಅರ್ಥಾತ್ ಬುದ್ಧಿಯೋಗವು ಒಬ್ಬ ತಂದೆಯ ಕಡೆಯಿರುವುದು. ಮಕ್ಕಳು ಮೊದಲಾದ ಯಾವುದೇ ದೇಹಧಾರಿಗಳ ನೆನಪು ಬರಬಾರದು. ದೇಹಾಭಿಮಾನ ಸಮಾಪ್ತಿಯಾಗಬೇಕು. ಈ ರೀತಿ ಯಾರು ಸಂಪೂರ್ಣವಾಗಿ ಬಲಿಯಾಗುತ್ತಾರೆ ಅವರಿಗೆ ತಂದೆಯಿಂದ 21 ಜನ್ಮಗಳ ಆಸ್ತಿ ಸಿಗುತ್ತದೆ. ಪರಸ್ಪರ ನಾಮ-ರೂಪದಲ್ಲಿ ಆಕರ್ಷಿತರಾದಾಗ ತಂದೆ ಹಾಗೂ ತಮ್ಮ ಹೆಸರನ್ನು ಹಾಳು ಮಾಡಿಕೊಳ್ಳುವರು.

ಪ್ರಶ್ನೆ: ತಂದೆ ಎಲ್ಲ ಮಕ್ಕಳ ಮೇಲೆ ಯಾವ ಕೃಪೆ ತೋರಿಸುತ್ತಾರೆ?

ಉತ್ತರ: ಕವಡೆಯಿಂದ ವಜ್ರ ಸಮಾನ ಮಾಡುವಂತಹ ಕೃಪೆ ತೋರುತ್ತಾರೆ. ಯಾವ ಮಕ್ಕಳು ಹೆಜ್ಜೆ-ಹೆಜ್ಜೆಯಲ್ಲಿ ತಂದೆಯ ಸಲಹೆಯನ್ನು ತೆಗೆದುಕೊಳ್ಳುತ್ತಾರೆ, ಏನನ್ನೂ ಮುಚ್ಚಿಡುವುದಿಲ್ಲ ಅಂತಹವರ ಮೇಲೆ ತಾನಾಗಿಯೇ ಕೃಪೆ ತೋರುತ್ತಾರೆ.

ಗೀತೆ: ಯಾರು ಈ ಎಲ್ಲಾ ಆಟವನ್ನು ರಚಿಸಿದವರು......

ಓಂ ಶಾಂತಿ. ಯಾರು ಈ ಹಾಡನ್ನು ರಚಿಸಿದ್ದಾರೆ, ಅವರು ಈ ಗೀತೆಯ ಅರ್ಥವನ್ನು ತಿಳಿದುಕೊಂಡಿಲ್ಲ. ನಿಮ್ಮನ್ನು ರಚಿಸಿ ನಿಮಗೆ ಎಷ್ಟೊಂದು ಒಳ್ಳೆಯ ಆಸ್ತಿಯನ್ನು ಕೊಟ್ಟಿದ್ದೆನು ಎಂದು ತಂದೆಯು ಮಕ್ಕಳಿಗೆ ತಿಳಿಸಿದ್ದಾರೆ. ಸ್ವರ್ಗವು ಹೊಸ ರಚನೆಯಾಗಿದೆ, ಸ್ವರ್ಗದ ರಚನೆಯನ್ನು ಹೇಗೆ ಮಾಡುತ್ತಾರೆಂದು ಪ್ರಪಂಚದವರು ತಿಳಿದುಕೊಂಡಿಲ್ಲ ಏಕೆಂದರೆ ಸತ್ಯಯುಗ ಎಂದು ಯಾವುದಕ್ಕೆ ಹೇಳಲಾಗುತ್ತದೆ ಎನ್ನುವುದನ್ನೇ ತಿಳಿಯದ ಕಾರಣ ಮತ್ತೆ ಇದನ್ನು ಹೇಗೆ ತಿಳಿದುಕೊಳ್ಳುತ್ತಾರೆ. ಈ ಜ್ಞಾನ ಯಾವುದೇ ಶಾಸ್ತ್ರಗಳಲ್ಲಿಲ್ಲ. ಸ್ವಯಂ ಪರಮಪಿತ ಪರಮಾತ್ಮನೇ ಬಂದು ಈ ಜ್ಞಾನವನ್ನು ಕೊಡುತ್ತಾರೆ ಮತ್ತೆ ಈ ಜ್ಞಾನ ಪ್ರಾಯಲೋಪವಾಗುತ್ತದೆ. ಈ ಜ್ಞಾನದಿಂದ ರಾಜಯೋಗವನ್ನು ಕಲಿತು ರಾಜ್ಯಭಾಗ್ಯವನ್ನು ತೆಗೆದುಕೊಳ್ಳುತ್ತೀರಿ. ಇದನ್ನು ಅಧ್ಯಾತ್ಮಿಕ (ಸ್ಪಿರಿಚುಯಲ್) ಜ್ಞಾನವೆಂದು ಕರೆಯಲಾಗುತ್ತದೆ. ಸ್ಪಿರಿಚುಯಲ್ ಎಂದು ಸ್ಪಿರಿಟ್ ಅರ್ಥಾತ್ ಆತ್ಮನಿಗೆ ಹೇಳಲಾಗುತ್ತದೆ. ತಂದೆಗೆ ಸುಪ್ರೀಂ ಸ್ಪಿರಿಟ್ (ಪರಮ ಆತ್ಮ) ಎಂದು ಹೇಳಲಾಗುತ್ತದೆ. ಹೀಗೆ ಅನೇಕ ಹೆಸರುಗಳನ್ನು ಇಡಲಾಗಿದೆ. ಆಧ್ಯಾತ್ಮಿಕ ಜ್ಞಾನ ಬೇಕು ಎಂದು ಹೇಳುತ್ತಾರೆ. ಫಿಲಾಸಫಿಯು (ತರ್ಕ ಶಾಸ್ತ್ರ) ಶಾಸ್ತ್ರಗಳ ಜ್ಞಾನವಾಗಿದೆ. ಶಾಸ್ತ್ರಗಳನ್ನು ಓದಿ ತಿಳಿದುಕೊಳ್ಳಲಾಗುತ್ತದೆ. ಪರಮಪಿತ ಪರಮಾತ್ಮನಂತೂ ಶಾಸ್ತ್ರಗಳನ್ನು ಓದುವುದಿಲ್ಲ, ಅವರಿಗೆ ಜ್ಞಾನಪೂರ್ಣರೆಂದು ಕರೆಯಲಾಗುತ್ತದೆ. ಅವರನ್ನು ಮನುಷ್ಯರು ಅಂತರ್ಯಾಮಿ ಎಂದು ತಿಳಿದುಕೊಳ್ಳುತ್ತಾರೆ ಆದರೆ ಅವರು ಅಂತರ್ಯಾಮಿ ಅಲ್ಲ. ನಾಟಕದನುಸಾರವಾಗಿ ಯಾರು ಎಂತಹ ಕರ್ಮವನ್ನು ಮಾಡುತ್ತಾರೆ, ಅವರಿಗೆ ಆ ಕರ್ಮದ ಫಲ ಅವಶ್ಯಕವಾಗಿ ಸಿಗುತ್ತದೆ. ಮಕ್ಕಳಿಗೆ ಕರ್ಮ, ಅಕರ್ಮ, ವಿಕರ್ಮದ ರಹಸ್ಯವನ್ನು ತಿಳಿಸುತ್ತಾರೆ. ಕರ್ಮವು ಯಾವಾಗ ಅಕರ್ಮವಾಗುತ್ತದೆ ನಂತರ ಕರ್ಮ ವಿಕರ್ಮ ಹೇಗೆ ಆಗುತ್ತದೆ, ಸತ್ಯಯುಗದಲ್ಲಿ ಯಾವುದೇ ಕರ್ಮ ವಿಕರ್ಮವಾಗುವುದಿಲ್ಲ ಏಕೆಂದರೆ ಅಲ್ಲಿ ರಾವಣ ರಾಜ್ಯ ಇರುವುದಿಲ್ಲ. ಆದುದರಿಂದ ಕರ್ಮ ಅಕರ್ಮವಾಗಿರುತ್ತದೆ. ಕರ್ಮದ ಪ್ರಭಾವವು ವಿಕರ್ಮವಾಗುವುದರಿಂದ ನಮ್ಮ ಮೇಲೆ ಬೀರುತ್ತದೆ. ಪಾಪ ಮಾಡಿಸುವವನು ರಾವಣನಾಗಿದ್ದಾನೆ. ಈಗ ಮಕ್ಕಳಿಗೆ ತಂದೆ ತಿಳಿಸಿಕೊಡುತ್ತಿದ್ದಾರೆ - ಸತ್ಯಯುಗದಲ್ಲಿ ವಿಕಾರವಿಲ್ಲದೆ ಮಕ್ಕಳ ಜನ್ಮ ಹೇಗೆ ಆಗುತ್ತದೆ, ಇದನ್ನು ಮನುಷ್ಯರು ತಿಳಿದುಕೊಂಡಿಲ್ಲ. ಸತ್ಯಯುಗದಲ್ಲಿಯೂ ವಿಕಾರ ಇರುತ್ತದೆ ಆದರೆ ಈ ಕಲಿಯುಗದಷ್ಟು ಇರುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಏಕೆಂದರೆ ಇಲ್ಲಿರುವ ಸನ್ಯಾಸಿ ಗುರುಗಳು ವರ್ಷಕ್ಕೊಮ್ಮೆ ಅಥವಾ ತಿಂಗಳಿಗೊಮ್ಮೆ ವಿಕಾರದಲ್ಲಿ ಹೋಗಿ ಎಂದು ತಿಳಿಸುತ್ತಾರೆ. ಆದರೆ ತಂದೆ ಕಾಮ ಮಹಾ ಶತ್ರು, ನೀವು ಅದರ ಮೇಲೆ ವಿಜಯಿಗಳಾಗಬೇಕೆಂದು ಹೇಳುತ್ತಾರೆ. ನೀವು ಸಂಪೂರ್ಣ ನಿರ್ವಿಕಾರಿಗಳಾಗಬೇಕಾಗಿದೆ. ಅಲ್ಲಿ ರಾವಣನು ಇಲ್ಲದ ಕಾರಣ ವಿಕಾರಗಳು ಎಲ್ಲಿಂದ ಬರುತ್ತದೆ. ಸಿಖ್ಖರು ಪರಮಾತ್ಮನಿಗೆ ಮಲಿನ ವಸ್ತ್ರವನ್ನು ಶುದ್ಧ ಮಾಡುವವರೆಂದು ಹೇಳುತ್ತಾರೆ... ಈಗ ಎಲ್ಲರೂ ಮಲಿನರಾಗಿದ್ದಾರಲ್ಲವೇ? ಅವರು ಯಾರ ನಿಂಧನೆಯನ್ನೂ ಮಾಡುವುದಿಲ್ಲ. ಯಾರು ಹೇಗೆ ಇರುತ್ತಾರೆ, ಅವರ ವಾಸ್ತವಿಕತೆಯನ್ನು ಹೇಳುತ್ತಾರೆ, ಹೇಗೆ ಕಳ್ಳನಿಗೆ ಕಳ್ಳ ಎಂದು ಹೇಳಲಾಗುತ್ತದೆ. ಗ್ರಂಥದಲ್ಲಿಯೂ ಬಹಳ ತಿಳುವಳಿಕೆಯನ್ನು ಬರೆಯಲ್ಪಟ್ಟಿದೆ. ಮುಸಲ್ಮಾನ್ ಮೊದಲಾದವರು ಇವರಿಗಿಂತ ಭಿನ್ನವಾಗಿದ್ದಾರೆ. ಗುರುನಾನಕ್ ಪರಮಪಿತ ಪರಮಾತ್ಮನ ಮಹಿಮೆಯನ್ನು ಮಾಡಿದ್ದಾರೆ. ಜಪ್ಸಾಹೇಬ್, ಸುಖಮಣಿ... ಅರ್ಥಾತ್ ತಂದೆಯನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಯಾರಿಗಾಗಿ ನೀವು ಅರ್ಧಕಲ್ಪದಿಂದ ನೆನಪು ಮಾಡಿದ್ದೀರಿ, ಒಂದುವೇಳೆ ಆ ವಸ್ತು ಸಿಕ್ಕಿ ಬಿಟ್ಟರೆ ಅಪಾರವಾದ ಖುಷಿಯಾಗಬೇಕಲ್ಲವೆ. ಆದರೆ ಯಾರು ತಮ್ಮನ್ನು ಮತ್ತೆ ಮತ್ತೆ ಆತ್ಮ ಎಂದು ತಿಳಿದುಕೊಳ್ಳುತ್ತಾರೆ ಅವರಿಗೆ ಖುಷಿಯಾಗುತ್ತದೆ. ಆತ್ಮ ಎಂದು ತಿಳಿದುಕೊಳ್ಳುವುದರಿಂದ ತಂದೆಯ ಜೊತೆ ಪ್ರೀತಿ ಇರುತ್ತದೆ. ಈ

ಸಮಯದಲ್ಲಿ ಯಾವ ಆತ್ಮನಿಗೂ ತನ್ನ ತಂದೆ ಯಾರು ಎಂದು ತಿಳಿದಿಲ್ಲ. ತಂದೆಯ ಮಕ್ಕಳಾಗಿ ತಂದೆಯ ಕರ್ತವ್ಯವನ್ನು ತಿಳಿಯದವರಿಗೆ ಕಡಿಮೆ ಬುದ್ಧಿವುಳ್ಳವರೆಂದು ಕರೆಯಲಾಗುತ್ತದೆ. ಪ್ರಹ್ಲಾದನ ಕಥೆಯನ್ನು ಹೇಳುತ್ತಾರೆ, ಪರಮಾತ್ಮನು ಪ್ರತಿಕಾರವನ್ನು ತೆಗೆದುಕೊಳ್ಳಲು ಸ್ಥಂಭದಿಂದ ಉದ್ಭವವಾದರು... ಆದರೆ ಪರಮಾತ್ಮ ಎಲ್ಲಿದ್ದಾರೆಂಬ ವಿಳಾಸವು ಗೊತ್ತಿಲ್ಲ. ಈಗ ನೀವು ಮಕ್ಕಳು ಮಾತ್ರ ತಿಳಿದುಕೊಂಡಿದ್ದೀರಿ. ನೀವು ಬ್ರಹ್ಮಾಕುಮಾರ-ಕುಮಾರಿ, ಪ್ರಜಾಪಿತ ಬ್ರಹ್ಮನ ಹೆಸರು ಸಹ ಕೇಳಿದ್ದೀರಿ. ಹೀಗೆ ಪರಮಪಿತ ಪರಮಾತ್ಮ ಬ್ರಹ್ಮನ ಮೂಲಕ ರಚನೆಯನ್ನು ರಚಿಸುತ್ತಾರೆ. ಮೊದಲು ಬ್ರಹ್ಮನನ್ನು ರಚಿಸಿ ನಂತರ ಬ್ರಹ್ಮನ ಮೂಲಕ ರಚನೆಯನ್ನು ರಚಿಸುತ್ತಾರೆ. ನೋಡಿ... ನನಗೆ ಎಷ್ಟೊಂದು ಮುಖವಂಶಾವಳಿ ಇದ್ದಾರೆ, ಎಲ್ಲರಿಗೂ ಶಿವ ತಂದೆಯಿಂದ ಆಸ್ತಿ ಸಿಗುತ್ತದೆ. ದತ್ತು ತೆಗೆದುಕೊಂಡಿರುವ ಮಕ್ಕಳು ಅಗತ್ಯವಾಗಿ ಬಡವರಾಗಿರುತ್ತಾರೆ. ಮೊದಲು ಬ್ರಹ್ಮಾ ತಂದೆಯನ್ನು ದತ್ತು ತೆಗೆದುಕೊಂಡರು ನಂತರ ಬ್ರಹ್ಮನ ಮೂಲಕ ನಾವೆಲ್ಲಾ ಮುಖ ವಂಶಾವಳಿಯಾದೆವು. ಆ ಕುಖ ವಂಶಾವಳಿ ಬ್ರಾಹ್ಮಣರು ಭೌತಿಕ ಯಾತ್ರೆಯನ್ನು ಕಲಿಸುತ್ತಾರೆ ಈ ಬ್ರಹ್ಮಾ ಮುಖವಂಶಾವಳಿ ಆತ್ಮಿಕ ಯಾತ್ರೆಯನ್ನು ಮಾಡಿಸುತ್ತಾರೆ. ಈ ಆತ್ಮಿಕ ಯಾತ್ರೆಯು ಯಾರಿಗೂ ಗೊತ್ತಿಲ್ಲ. ನಾವು ನಿರ್ವಾಣ ಧಾಮದಲ್ಲಿ ಹೋಗೋಣವೆಂದು ಪುರುಷಾರ್ಥವನ್ನು ಮಾಡುತ್ತಿರುತ್ತಾರೆ. ಆದರೆ ಅವರ ಬುದ್ಧಿಯ ಯಾತ್ರೆಯು ಬ್ರಹ್ಮತತ್ವದ ಕಡೆ ಇರುತ್ತದೆ. ಅದು ಬ್ರಹ್ಮತತ್ವದ ಯಾತ್ರೆಯಾಗುತ್ತದೆ. ನಾವು ಬ್ರಹ್ಮಮಹಾತತ್ವದಲ್ಲಿ ಲೀನವಾಗುತ್ತೇವೆಂದು ಹೇಳುತ್ತಾರೆ. ಆಮೇಲೆ ಶಾರೀರಿಕ ಯಾತ್ರೆಗಳನ್ನು ಮಾಡುವ ಅವಶ್ಯಕತೆ ಇರುವುದಿಲ್ಲ. ಅವರ ಯಾತ್ರೆಯು ನಿರ್ವಾಣಧಾಮಕ್ಕೆ ಹೋಗುವ ಯಾತ್ರೆಯಾಗಿದೆ ನಂತರ ಅದನ್ನು ಜ್ಯೋತಿಯಲ್ಲಿ-ಜ್ಯೋತಿ ಲೀನವಾಯಿತು ಅಥವಾ ಕೆಸರು ಕೆಸರಿನಲ್ಲಿ ಸೇರಿ ಹೋಯಿತೆಂದು ಹೇಳುವುದಿಲ್ಲ. ಇಲ್ಲಿ ಆತ್ಮವು ಯಾತ್ರೆ ಮಾಡುತ್ತದೆ. ಬ್ರಹ್ಮತತ್ವದಲ್ಲಿ ಹೋಗುತ್ತದೆ. ಇದು ಆತ್ಮಿಕ ಯಾತ್ರೆಯಾಗಿದೆ, ಉಳಿದವೆಲ್ಲವೂ ಶಾರೀರಿಕ ಯಾತ್ರೆಗಳಾಗಿವೆ. ನಿರ್ವಾಣಧಾಮಕ್ಕೆ ಯಾರು ಕರೆದುಕೊಂಡು ಹೋಗುತ್ತಾರೆಂದು ಗೊತ್ತಿಲ್ಲ. ನಾನು ಎಲ್ಲರಿಗೂ ಮಾರ್ಗದರ್ಶಕನಾಗಿ ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಬೇಹದ್ದಿನ ತಂದೆಯು ಹೇಳುತ್ತಾರೆ. ಸತ್ಯಯುಗದಲ್ಲಿ ಬಹಳ ಕಡಿಮೆ ಆತ್ಮಗಳಿದ್ದು ಉಳಿದವರೆಲ್ಲರೂ ಅಗತ್ಯವಾಗಿ ಮನೆಗೆ ಹಿಂತಿರುಗುತ್ತಾರೆ. ಸತ್ಯ ಮಾತನ್ನು ತಂದೆಯೇ ತಿಳಿಸುತ್ತಾರೆ. ನೀವೀಗ ಸತ್ಯ-ಸತ್ಯ ಯಾತ್ರೆಯಲ್ಲಿದ್ದಾರೆ. ನಾವು ಆತ್ಮ ಆಗಿದ್ದೇವೆ, ಈಗ ನಾಟಕವು ಮುಗಿಯುತ್ತಿದೆ ಆದುದರಿಂದ ನಾವೀಗ ಮನೆಗೆ ಹಿಂತಿರುಗಬೇಕು. ಇದು ಪಕ್ಕಾ ಇರಬೇಕು. ಏಕಾಂತದಲ್ಲಿ ಕುಳಿತು ನಾನು ಆತ್ಮ ಆಗಿದ್ದೇನೆಂಬ ಚಿಂತನೆ ಮಾಡಬೇಕು. ತಂದೆಯು ನಮ್ಮನ್ನು ಕರೆದುಕೊಂಡು ಹೋಗುವ ಸಲುವಾಗಿ ಬಂದಿದ್ದಾರೆ. ಈ ಶರೀರವು ಅಪವಿತ್ರ ಶರೀರವಾಗಿದೆ. ಈ ರೀತಿ ಕುಳಿತು ತಮ್ಮೊಂದಿಗೆ ತಾವೇ ಮಾತನಾಡಬೇಕು, ಇದನ್ನು ವಿಚಾರ ಸಾಗರ ಮಂಥನವೆಂದು ಕರೆಯಲಾಗುತ್ತದೆ. ತಂದೆಯಂತು ಕರ್ಮವನ್ನು ಮಾಡಲು ಅನುಮತಿಯನ್ನು ಕೊಟ್ಟಿದ್ದಾರೆ ಆದರೆ ರಾತ್ರಿಯಲ್ಲಾ ಎಚ್ಚರವಾಗಿದ್ದು ಅಭ್ಯಾಸವನ್ನು ಮಾಡಬೇಕು. ಆಗ ಇಡೀ ದಿನ ಸ್ಥಿತಿಯು ಬಹಳ ಚೆನ್ನಾಗಿರುತ್ತದೆ, ತಂದೆಯ ಸಹಯೋಗ ಸಿಗುತ್ತದೆ. ಈ ರೀತಿ ರಾತ್ರಿಯೆಲ್ಲಾ ಮಾಡಿದ ಅಭ್ಯಾಸವು ದಿನದಲ್ಲಿ ಉಪಯೋಗವಾಗುತ್ತದೆ. ರಾತ್ರಿಯೆಲ್ಲಾ ಎಚ್ಚರವಾಗಿರಬೇಕು-2 ಗಂಟೆಯ ನಂತರ ಎಚ್ಚರವಿರಬೇಕು, ಏಕೆಂದರೆ ರಾತ್ರಿ 9 ಗಂಟೆಯಿಂದ 12 ಗಂಟೆಯವರೆಗೆ ಸಮಯ ಬಹಳ ಅಶುದ್ಧವಾಗಿರುತ್ತದೆ. ಆದುದರಿಂದ ಬೆಳಗ್ಗೆ ಮಾತ್ರ ವಿಚಾರ ಸಾಗರ ಮಂಥನ ಮಾಡಬೇಕಾಗುತ್ತದೆ. ನಾನು ಆತ್ಮನಾಗಿದ್ದೇನೆ, ಈಗ ಇನ್ನೇನು ತಂದೆಯ ಜೊತೆಯಲ್ಲಿ ಮನೆಗೆ ಹೋಗಬೇಕಾಗಿದೆ. ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ತೆಗೆದುಕೊಳ್ಳುತ್ತೇನೆ - ಇದು ತಮ್ಮೊಂದಿಗೆ ತಾವೇ ಮಾತನಾಡಿಕೊಳ್ಳುವ ವಿಧಿಯಾಗಿದೆ. ಈಗ ನಮ್ಮ 84 ಜನ್ಮಗಳು ಪೂರ್ತಿಯಾಗಿವೆ. ಇನ್ನು ಕಡಿಮೆ ದಿನಗಳು ಮಾತ್ರ ಉಳಿದಿದೆ. ಇದು ಬೇಹದ್ದಿನ ನಾಟಕವಾಗಿದೆ, ಹೀಗೆಲ್ಲಾ ಬುದ್ಧಿಯಲ್ಲಿದ್ದಾಗ ದೇಹಾಭಿಮಾನವು ಸಮಾಪ್ತಿಯಾಗುತ್ತದೆ. ಆಗ ತಂದೆ ಹಾಗೂ ಆಸ್ತಿಯ ನೆನಪಿರುತ್ತದೆ.

ತಂದೆಯೇ ಬಂದು ಶಿಕ್ಷಣವನ್ನು ಕೊಡುತ್ತಿದ್ದಾರೆ. ಇಲ್ಲವಾದರೆ ನಾವು ಶ್ರೇಷ್ಠ ಹಾಗೂ ಪವಿತ್ರರಾಗುವುದು ಹೇಗೆ! ಈ ಸಮಯದಲ್ಲಿ ಬಹಳ ಲಂಚ ಮೊದಲಾದವುಗಳಿವೆ, ಆದುದರಿಂದ ಸದಾಚಾರಿ ಸಂಘಗಳನ್ನು ಮಾಡುತ್ತಿರುತ್ತಾರೆ. ಮೊದಲೆಲ್ಲಾ ಈ ಮಾತುಗಳಿರಲಿಲ್ಲ. ಈ ಲಂಚ ಮೊದಲಾದವುಗಳು ಈಗ ಮಾತ್ರ ನಡೆಯುತ್ತಿವೆ. ಮಂತ್ರಿ ಮೊದಲಾದವರಾದಾಗ ಎಷ್ಟೊಂದು ಹಣವನ್ನು ಲೂಟಿ ಮಾಡುತ್ತಾರೆ. ಎಷ್ಟೊಂದು ಭ್ರಷ್ಟಾಚಾರ ಮಾಡುತ್ತಾರೆ. ಸತ್ಯಯುಗದಲ್ಲಿ ಶ್ರೇಷ್ಠಾಚಾರಿಗಳಿರುತ್ತಾರೆ. ನೀವು ಈಗ ಬಹಳ ಶ್ರೇಷ್ಠಾಚಾರಿಗಳಾಗುತ್ತಿದ್ದೀರಿ. ಅಲ್ಲಿ ಪಾಪದ ಹೆಸರಿರುವುದಿಲ್ಲ. ತಂದೆ ಬಂದು ಸ್ವರ್ಗಕ್ಕೆ ಯೋಗ್ಯರನ್ನಾಗಿ ಮಾಡುತ್ತಾರೆ. ಯಾರೆಲ್ಲಾ ಅಪವಿತ್ರವಾಗಿದ್ದಾರೆ, ಅವರನ್ನು ಹೂಗಳನ್ನಾಗಿ ಮಾಡುತ್ತಾರೆ, ಸ್ವರ್ಗ ಸ್ಥಾಪನೆ ಮಾಡಿ ಸದ್ಗತಿಯನ್ನು ಕೊಟ್ಟು ನಂತರ ತಂದೆಯು ಬಚ್ಚಿಟ್ಟುಕೊಳ್ಳುತ್ತಾರೆ. ಎಲ್ಲರಿಗೂ ಸದ್ಗತಿಯನ್ನು ಕೊಡುವುದು ನನ್ನ ಕರ್ತವ್ಯವಾಗಿದೆ. ನಾನು ಇಡೀ ಪ್ರಪಂಚವನ್ನು ಹೇಗಿರುವುದನ್ನು ಹೇಗೆ ಮಾಡುತ್ತೇನೆ! ಮನುಷ್ಯರೂ ಸಹ ಈ ಪ್ರಪಂಚವು ವಿನಾಶವಾಗುತ್ತದೆಯೆಂದು ಹೇಳುತ್ತಾರೆ. 5000 ವರ್ಷದೊಳಗೆ ಏನೇನು ಆಗುತ್ತದೆ ಎನ್ನುವುದನ್ನು ಸಮಾಚಾರ ಪತ್ರಿಕೆಯಲ್ಲಿ ಹಾಕುತ್ತಾರೆ. ಒಳ್ಳೆಯದು, ವಿನಾಶವಾಗುತ್ತದೆ-ನಂತರ ಏನಾಗುತ್ತದೆ? ಈ ವಿನಾಶವು ಏಕೆ ಆಗುತ್ತದೆ ಎಂದು ಕಾರಣವನ್ನು ಹೇಳಬೇಕಲ್ಲವೆ? ತಂದೆಯು ಸ್ವರ್ಗ ಸ್ಥಾಪನೆ ಮಾಡುತ್ತಿರುವುದರಿಂದ ನರಕದ ವಿನಾಶವು ಅಗತ್ಯವಾಗಿ ಆಗುತ್ತದೆಯೆಂದು ನೀವು ತಿಳಿದುಕೊಂಡಿದ್ದೀರಿ. ತಂದೆಯೇ ಬಂದು ಹಳೆಯ ಪ್ರಪಂಚದಿಂದ ಹೊಸ ಪ್ರಪಂಚವನ್ನು ಮಾಡುತ್ತಾರೆ. ಅಲ್ಲಿ ಅಕಾಲ ಮೃತ್ಯುವಿರುವುದಿಲ್ಲ. ಎಂದಿಗೂ ಅಲ್ಲಿ ಸಾಯುವಂತಹ ಭಯವಿರುವುದಿಲ್ಲ. ಏಕೆಂದರೆ ಅಲ್ಲಿ ಆತ್ಮದ ಜ್ಞಾನವಿರುತ್ತದೆ - ನಾವು ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ತೆಗೆದುಕೊಳ್ಳುತ್ತೇವೆ ಎಂದು. ಸ್ವರ್ಗದಲ್ಲಿ ತಡವಾಗಿ ಬಂದರೆ ಬಹಳ ಕಡಿಮೆ ಜನ್ಮಗಳನ್ನು

ತೆಗೆದುಕೊಳ್ಳಬೇಕಾಗುತ್ತದೆಂದೂ ಸಹ ತಿಳಿದುಕೊಳ್ಳುತ್ತಾರೆ. ಈಗ ನಮ್ಮ 84 ಜನ್ಮಗಳು ಪೂರ್ತಿಯಾಗಿವೆ. ಇದನ್ನು ಪ್ರಪಂಚದವರು ತಿಳಿದುಕೊಂಡಿಲ್ಲ. ನೀವು ಆತ್ಮಗಳಿಗೆ ಪರಮಪಿತ ಪರಮಾತ್ಮ ಕುಳಿತು ತಿಳಿಸುತ್ತಾರೆ. ಪ್ರಜಾಪಿತನ ಮಕ್ಕಳು ಪರಸ್ಪರ ಸಹೋದರ-ಸಹೋದರಿಯರಾಗಿದ್ದಾರೆ ಆದುದರಿಂದ ಯಾವುದೇ ವಿಕರ್ಮವನ್ನು ಮಾಡಬಾರದು. ಅವರು ಹಿಂದೂ-ಚೀನಿ ಸಹೋದರ ಸಹೋದರರೆಂದು ಹೇಳಿ ಮತ್ತೆ ವಿಕಾರದಲ್ಲಿ ಹೇಗೆ ಹೋಗುತ್ತಾರೆ. ಹೇಳುವುದೇನೋ ಸಹಜವಾಗಿದೆ, ಆದರೆ ಅದರ ಅರ್ಥವನ್ನು ತಿಳಿದುಕೊಂಡಿಲ್ಲ. ಸಹೋದರ-ಸಹೋದರರ ಅರ್ಥ ಆತ್ಮನಿಗೆ ಅನ್ವಯಿಸುತ್ತದೆ. ಸಹೋದರ ಸಹೋದರಿಯರ ಸಂಬಂಧದಲ್ಲಿ ವಿಕಾರದ ದೃಷ್ಟಿ ಏರುವುದಿಲ್ಲ ಲೌಕಿಕ ಸಂಬಂಧದಲ್ಲಿಯೂ ಸಹ ಒಂದು ವೇಳೆ ಸಮೀಪ ಸಂಬಂಧದಲ್ಲಿ ವಿವಾಹವನ್ನು ಮಾಡಿದರೆ ಗಲಾಟೆಯಾಗುತ್ತದೆ.

ನೀವೆಲ್ಲಾ ದೇವೀ-ದೇವತೆಗಳು ಶ್ರೇಷ್ಠಾಚಾರಿಗಳಿದ್ದವರು ಈಗ ಭ್ರಷ್ಟಾಚಾರಿಗಳಾಗಿದ್ದೀರಿ, ಈಗ ಮತ್ತೆ ಶ್ರೇಷ್ಠಾಚಾರಿಗಳಾಗುತ್ತಿದ್ದೀರಿ. ನಾವೇ ಶ್ರೇಷ್ಠಾಚಾರಿ 16 ಕಲಾ ಸಂಪನ್ನರಾಗಿದ್ದವರು ನಂತರ 14 ಕಲೆಯಲ್ಲಿ ಬಂದು ಆಮೇಲೆ ಭ್ರಷ್ಟಾಚಾರಿಯಾಗುತ್ತಾ ಈಗ ಇನ್ನೂ ತಮೋಪ್ರಧಾನ ಭ್ರಷ್ಟಾಚಾರಿಗಳಾಗಿದ್ದಾರೆ. ಈ ಸೃಷ್ಟಿಚಕ್ರದ ಚಿತ್ರದಲ್ಲಿಯೂ ಸಹ ಸ್ಪಷ್ಟವಾಗಿ ಬರೆಯಲ್ಪಟ್ಟಿದೆ. ವರ್ಣಗಳ ರೂಪವನ್ನೂ ಸಹ ಮಾಡುತ್ತಾರೆ ಆದರೆ ಆ ಚಿತ್ರದಲ್ಲಿ ಶಿಕೆ (ಜುಟ್ಟು) ವುಳ್ಳ ಬ್ರಾಹ್ಮಣರನ್ನು ತೋರಿಸುವುದಿಲ್ಲ. ಹೀಗೆ ಶಿವ ತಂದೆ ಹಾಗೂ ಬ್ರಾಹ್ಮಣರನ್ನು ತೋರಿಸುವುದಿಲ್ಲ. ಈಗ ನಾವು ಬ್ರಾಹ್ಮಣರಿಂದ ನಂತರ ದೇವೀ-ದೇವತೆಗಳಾಗುತ್ತೇವೆ ಆದುದರಿಂದ ದೈವೀಗುಣಗಳನ್ನು ಧಾರಣೆ ಮಾಡಬೇಕು. ಈಗ ಮನೆಗೆ ಹಿಂತಿರುಗಬೇಕಾಗಿದೆ, ನಂತರ ಇಡೀ ಪ್ರಪಂಚ ಸ್ವರ್ಗವಾಗುತ್ತದೆ. ಇಡೀ ಭೂಮಿ ನೀರಿನಿಂದ ಆವರಿಸುತ್ತದೆ. ಈ ರೀತಿಯಾಗಿ ರಾತ್ರಿಯಲ್ಲಾ ವಿಚಾರ ಸಾಗರ ಮಂಥನ ಮಾಡಿದರೆ ಹಗಲಿನಲ್ಲಿ ಕರ್ಮ ಮಾಡುವಾಗ ಬಹಳ ಸಹಯೋಗ ಸಿಗುತ್ತದೆ. ಈಗ ನಾವು ಮಧುರ ತಂದೆಯ ಸಮೀಪ ಹೋಗುತ್ತೇವೆ, ಅದಕ್ಕಾಗಿ ನಾವು ಎಲ್ಲೆಲ್ಲಿ ಅಲೆದು ದುಃಖಿಗಳಾಗಿದ್ದೇವೆ ಆದರೂ ಸಹ ಯಾವ ಮಾರ್ಗವೂ ಸಿಗಲಿಲ್ಲ. ಈಗ ನಾವು ಆಸ್ತಿಯನ್ನು ಪಡೆಯುವಂತಹ ಪುರುಷಾರ್ಥವನ್ನು ಮಾಡುತ್ತಿದ್ದೇವೆ ಆದರೆ ಮಾಯೆ ಬಹಳ ಪ್ರಬಲವಾಗಿದೆ ಆದುದರಿಂದ ಬಹಳ ಮೋಸ ಮಾಡುತ್ತದೆ, ತಕ್ಷಣ ಕಿವಿ, ಮೂಗನ್ನು ಹಿಡಿದುಕೊಳ್ಳುತ್ತದೆ. ಆಗ ಭ್ರಷ್ಟಾಚಾರಿಗಳಾಗುತ್ತಾರೆ, ಕಾಮದ ನಶೆ ಬಂದು ಬಿಡುತ್ತದೆ. ಆಗ ಯಾರ ನಾಮ ರೂಪದಲ್ಲಿಯಾದರೂ ಸಿಕ್ಕಿಕೊಂಡು ಪ್ರಿಯತಮ ಪ್ರಿಯತಮೆಯರಂತೆ ಆಗುತ್ತಾರೆ. ಈ ರೀತಿ ಮಾಯೆಗೆ ಮೋಸ ಹೋಗುತ್ತಾರೆ. ಲೋಭವೂ ಸಹ ಒಮ್ಮೆಯೇ ಹೆಸರಿಗೆ ಕಳಂಕ ತರುತ್ತದೆ. ಇದೆಲ್ಲವೂ ನಡೆಯುತ್ತಿರುತ್ತದೆ ಆದುದರಿಂದ ಮಕ್ಕಳೇ ಯೋಗದಲ್ಲಿರಬೇಕೆಂದು ತಂದೆ ಹೇಳುತ್ತಾರೆ. ಸತ್ಯಯೋಗಿಯು ನಾಲ್ಕು-ಐದು ದಿನ ಊಟ ಇಲ್ಲದಿದ್ದರೂ ಯೋಚನೆ ಮಾಡುವುದಿಲ್ಲ, ಬಹಳ ಖುಷಿಯಲ್ಲಿರುತ್ತಾರೆ. ಈ ರೀತಿ ಸ್ಥಿತಿ ಇರಬೇಕು ನನ್ನಲ್ಲಿ ಯಾವುದೇ ವಸ್ತುವಿನ ಲೋಭವಿಲ್ಲವೇ ಎಂದು ನೋಡಿಕೊಳ್ಳಬೇಕು! ನಾವು ಸಂಪೂರ್ಣ ತೇರ್ಗಡೆಯಾಗಿ ತೋರಿಸಬೇಕೆಂಬ ಗುರಿ ಇರಬೇಕು ಏಕೆಂದರೆ ಇದು ಕಲ್ಪ-ಕಲ್ಪದ ಪಾತ್ರವಾಗಿದೆ. ನಾವು ಲಕ್ಷ್ಮೀ-ನಾರಾಯಣರನ್ನು ಸ್ವೀಕರಿಸಲು ಅಥವಾ ರಾಜ್ಯಭಾಗ್ಯವನ್ನು ತೆಗೆದುಕೊಳ್ಳಲು ಯೋಗ್ಯನಾಗಿದ್ದೇನೆ ಎಂದು ನೋಡಿಕೊಳ್ಳಬೇಕು. ಒಂದು ವೇಳೆ ಯಾವುದಾದರೂ ಬಲಹೀನತೆಗಳಿದ್ದರೆ ತಗೆದುಹಾಕಬೇಕು ಏಕೆಂದರೆ ಬಲಹೀನತೆಗಳನ್ನು ಬಚ್ಚಿಡಲು ಆಗುವುದಿಲ್ಲ. ಈಗ ನಿಮ್ಮ ಸಂಬಂಧ ಶಿವ ತಂದೆಯ ಜೊತೆಗಿದೆ. ಯಾರನ್ನಾದರೂ ಮೇಲೆ ಎತ್ತಲು ದೃಷ್ಟಿಯನ್ನು ಕೊಡುತ್ತಾರೆ. ತಂದೆ ಬಹಳ ಸಹಯೋಗ ಕೊಡುತ್ತಾರೆ. ಬ್ರಹ್ಮಾಕುಮಾರಿಯರು ನಾವು ಬಹಳ ಚೆನ್ನಾಗಿ ಮುರುಳಿಯನ್ನು ಹೇಳಿದೆವು, ನಾವು ಚೆನ್ನಾಗಿ ಮಾಡುತ್ತೇವೆ ಎಂಬ ಅಹಂಕಾರದ ಸ್ಥಿತಿಯು ನಮ್ಮನ್ನು ಕೆಳಗೆ (ಕನಿಷ್ಠ) ಬೀಳಿಸುತ್ತದೆ. ಯಾರು ಒಳ್ಳೊಳ್ಳೆಯ ಮಕ್ಕಳು ತಂದೆಯಿಂದ ಬಹಳ ಸಹಯೋಗ ಸಿಕ್ಕಿತೆಂದು ಹೇಳುತ್ತಾರೆ. ಕೆಲವರಲ್ಲಿ ಮಾಯೆ ಪ್ರವೇಶವಾಗುವುದರಿಂದ ಕೆಳಗೆ ಬೀಳುತ್ತಾರೆ. ಇದರಲ್ಲಿ ಪೂರ್ತಿ ಆತ್ಮಾಭಿಮಾನಿಯಾಗಬೇಕು, ದೇಹದ ಕಡೆ ದೃಷ್ಟಿ ಹೋಗಬಾರದು. ಸುಧಾರಣೆ ಆಗಬೇಕೆಂದು ತಂದೆ ಶಿಕ್ಷಣ ಕೊಡುತ್ತಾರೆ. ಮಾಯೆಗೆ ಮೋಸ ಹೋಗಬೇಡಿ, ಏಕೆಂದರೆ ಮೋಸ ಹೋದರೆ ಪದವಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಆ ಪತಿಯನ್ನು ನೀವು ಎಷ್ಟೊಂದು ನೆನಪು ಮಾಡುತ್ತೀರಿ ಆದರೆ ಇವರು ಪತಿಯರ ಪತಿಯಾಗಿದ್ದು ನಿಮಗೆ ಅಮೃತ ಕುಡಿಸುತ್ತಾರೆ, ಕವಡೆಯಿಂದ ವಜ್ರ ಸಮಾನ ಮಾಡುತ್ತಾರೆ. ಇಂತಹ ತಂದೆಯನ್ನು ನೀವು ಎಷ್ಟೊಂದು ನೆನಪು ಮಾಡಬೇಕಲ್ಲವೇ! ಶ್ರೀಮತದಂತೆ ಪುರುಷಾರ್ಥವನ್ನು ಮಾಡಬೇಕು. ಯಾವುದೇ ಮಾತಿದ್ದರೆ ತಂದೆಯನ್ನು ಕೇಳಬೇಕು, ಬಾಬಾ ನನ್ನಲ್ಲಿ ಯಾವ ಅವಗುಣವಿದೆ! ಎಂದು ಕೇಳುತ್ತಾ ದೇಹಾಭಿಮಾನವನ್ನು ದೂರ ಮಾಡಿಕೊಳ್ಳಬೇಕು. ಯಾರು ತಂದೆಗೆ ಸಂಪೂರ್ಣವಾಗಿ ಬಲಿಯಾಗುತ್ತಾರೆ, ಅವರಿಗೆ 21 ಜನ್ಮಗಳ ಆಸ್ತಿ ಸಿಗುತ್ತದೆ. ಸಂಪೂರ್ಣ ಬಲಿಯಾಗುವುದೆಂದರೆ ಬುದ್ಧಿಯು ಒಬ್ಬ ತಂದೆಯಲ್ಲಿರುವುದಾಗಿದೆ. ಮಕ್ಕಳು ಮೊದಲಾದ ಕಡೆ ಬುದ್ಧಿ ಹೋಗಬಾರದು. ಮಕ್ಕಳೇ ಇದರ ಬದಲು ನಿಮಗೆಲ್ಲವೂ ಹೊಸದಾಗಿ ಸಿಗುತ್ತದೆ ಎಂದು ತಂದೆ ಹೇಳುತ್ತಾರೆ. ಭಗವಂತನ ಕೃಪೆಯಿಂದ ಮಗು ಪ್ರಾಪ್ತಿಯಾಯಿತೆಂದು ಹೇಳುತ್ತಾರೆ. ನಿಮ್ಮನ್ನು ಕವಡೆಯಿಂದ ವಜ್ರ ಸಮಾನ ಮಾಡುತ್ತೇನೆ. ಗೃಹಸ್ಥ ವ್ಯವಹಾರದಲ್ಲಿರುತ್ತಾ ಎಲ್ಲವನ್ನೂ ತಂದೆಯದಾಗಿದೆ ಎಂದು ತಿಳಿದುಕೊಳ್ಳಬೇಕು. ಹೆಜ್ಜೆ-ಹೆಜ್ಜೆಯಲ್ಲಿ ತಂದೆಯ ಸಲಹೆಯನ್ನು ತೆಗೆದುಕೊಳ್ಳಬೇಕು. ಯಾವುದೇ ಉಲ್ಟಾ ಕರ್ಮ ಮಾಡಲು ತಂದೆ ಅವಕಾಶ ಕೊಡದಂತೆ ಸಲಹೆಯನ್ನು ಕೊಡುತ್ತಾರೆ. ತಂದೆಯ ಸಲಹೆಯನ್ನು ಯಾವುದೇ ವಿಕಾರಿಗಳಿಗೆ ಕೊಡುವುದಿಲ್ಲ. ಅವಿನಾಶಿ ಸರ್ಜನ್ನಿಂದ ಏನನ್ನೂ ಬಚ್ಚಿಟ್ಟುಕೊಳ್ಳಬಾರದು. ಹೆಜ್ಜೆ-ಹೆಜ್ಜೆಯಲ್ಲಿ ಕೇಳುತ್ತಿರಬೇಕು. ಬಾಬಾ ಇಂತಹ ವಿಕಾರ ಬಹಳ ಸತಾಯಿಸುತ್ತದೆ ಎಂದು ಕೇಳುತ್ತಾ ಪತ್ರವನ್ನು ಬರೆಯುತ್ತಾರೆ. ಕೆಲವರು ಮುಖವನ್ನು ಕಪ್ಪು ಮಾಡಿಕೊಂಡರೂ ತಂದೆಗೆ ಸತ್ಯವನ್ನು ಹೇಳುವುದಿಲ್ಲ. ಹೀಗೆ ತಂದೆಯಿಂದ ಬಚ್ಚಿಟ್ಟುಕೊಂಡರೆ ಇನ್ನೂ

ಪತಿತರಾಗುತ್ತೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸಂಪೂರ್ಣ ತೇರ್ಗಡೆಯಾಗಲು ಎಲ್ಲಾ ಬಲಹೀನತೆಗಳನ್ನು, ವಿಕಾರಗಳ ಅಂಶವನ್ನು ಸಮಾಪ್ತಿ ಮಾಡಬೇಕು. ಯಾವುದೇ ಮಾತಿನ ಅಹಂಕಾರವಿರಬಾರದು.

2. ದೃಷ್ಟಿಯನ್ನು ಬಹಳ ಪವಿತ್ರ ಶುದ್ಧ ಮಾಡಿಕೊಳ್ಳಬೇಕು. ಎಂದಿಗೂ ಯಾವುದೇ ದೇಹಧಾರಿಗಳ ಹಿಂದೆ ಮೋಹಿತರಾಗಬಾರದು. ಸಂಪೂರ್ಣ ಆತ್ಮ-ಅಭಿಮಾನಿಯಾಗಬೇಕು.

ವರದಾನ: ಶಾಂತಿಯ ಶಕ್ತಿಯಿಂದ ಕೆಡಕನ್ನು ಒಳ್ಳೆಯದರಲ್ಲಿ ಬದಲಾಯಿಸುವಂತಹ ಶುಭ ಭಾವನಾ ಸಂಪನ್ನ ಭವ.

ಹೇಗೆ ವಿಜ್ಞಾನದ ಸಾಧನಗಳಿಂದ ವ್ಯರ್ಥವಾದ ವಸ್ತುಗನ್ನೂ ಪರಿವರ್ತನೆ ಮಾಡುತ್ತಾ ಒಳ್ಳೆಯ ವಸ್ತುವನ್ನಾಗಿ ಮಾಡಿ ಬಿಡುತ್ತಾರೆ. ಹಾಗೆಯೇ ತಾವು ಶಾಂತಿಯ ಶಕ್ತಿಯಿಂದ ಕೆಟ್ಟ ಮಾತು ಅಥವಾ ಕೆಟ್ಟ ಸಂಬಂಧವನ್ನು ಕೆಟ್ಟದರಿಂದ ಒಳ್ಳೆಯದರಲ್ಲಿ ಪರಿವರ್ತನೆ ಮಾಡಿಬಿಡಿ. ಈ ರೀತಿ ಶುಭಭಾವನಾ ಸಂಪನ್ನರಾಗಿರಿ, ಆ ತಮ್ಮ ಶ್ರೇಷ್ಠ ಸಂಕಲ್ಪದಿಂದ ಅನ್ಯ ಆತ್ಮರನ್ನೂ ಕೆಡುಕಿನಿಂದ ಬದಲಾಗಿ ಒಳ್ಳೆಯದನ್ನೇ ಧಾರಣೆ ಮಾಡಿಕೊಂಡು ಬಿಡಲಿ. ಜ್ಞಾನಪೂರ್ಣನ ಲೆಕ್ಕದಿಂದ ಸರಿ-ತಪ್ಪನ್ನು ತಿಳಿಯುವುದು ಬೇರೆ ಮಾತು ಆದರೆ ಸ್ವಯಂನಲ್ಲಿ ಕೆಟ್ಟದ್ದನ್ನು ಕೆಟ್ಟ ರೂಪದಲ್ಲಿ ಧಾರಣೆ ಮಾಡುವುದು ತಪ್ಪಾಗಿದೆ ಆದ್ದರಿಂದ ಕೆಟ್ಟದ್ದನ್ನು ನೋಡುತ್ತಾ, ತಿಳಿದಿದ್ದರೂ ಅದನ್ನು ಒಳ್ಳೆಯದರಲ್ಲಿ (ಸಮರ್ಥ) ಬದಲಾಯಿಸಿ ಬಿಡಿ.

ಸ್ಲೋಗನ್: ಸಹನಶೀಲತೆಯ ಗುಣವನ್ನು ಧಾರಣೆ ಮಾಡಿಕೊಳ್ಳುತ್ತೀರೆಂದರೆ ಕಠೋರ ಸಂಸ್ಕಾರವೂ ಶೀತಲವಾಗಿ ಬಿಡುತ್ತದೆ.